ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

# ಭವಿಷ್ಯದ ಸವಾಲುಗಳಿಗೆ ಸಿದ್ಧರಾಗಿ



ಬೆಂಗಳೂರು, ಡಿ.6– ಹೊಸ ಬೆಳವಣಿಗೆಗೆ ಮತ್ತು ಹೊಸ ಯೋಜನೆಗಳಿಗೆ ಮಾರ್ಗ ಹುಡುಕಿ ಹೊರಟಾಗ ಹಲವಾರು ಸವಾಲುಗಳು ಎದುರಾಗುತ್ತವೆ. ಅದನ್ನು ನಿಭಾಯಿಸಲು ಯೋಗ ಮತ್ತು ಅಧ್ಯಾತ್ಮ ಒಳ್ಳೆಯ ಸಾಧನ ಎಂದು ಎಸ್. ವ್ಯಾಸ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ನಾಗೇಂದ್ರ ತಿಳಿಸಿದ್ದಾರೆ.

ಜೈನ ವಿಶ್ವವಿದ್ಯಾನಿಲಯದ 5ನೆ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಬೌದ್ಧಿಕ ತಿಳುವಳಿಕೆ, ಬದ್ಧತೆ ಹಾಗೂ ಹೆಚ್ಚಿನ ಸಂಕಲ್ಪವನ್ನು ಜನರು ನಿಮ್ಮಿಂದ ನಿರೀಕ್ಷಿಸುತ್ತಾರೆ. ಅದನ್ನು ನೀವು ಅರ್ಥ ಮಾಡಿಕೊಂಡು ಜ್ಞಾನ ಹೊಂದಬೇಕು ಎಂದು ಅವರು ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದರು.

ವಿದ್ಯಾರ್ಥಿಗಳು ಕೇವಲ ಪುಸ್ತಕದ ವಿಷಯಗಳನ್ನು ತಲೆಗೆ ಹಾಕಿಕೊಳ್ಳದೆ ಇತ್ತೀಚಿನ ಆಧುನಿಕ ಯುಗದಲ್ಲಿ ಬೇಕಾದಂತಹ ಜ್ಞಾನವನ್ನೂ ಕೂಡ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ಪ್ರಥಮ ಬಾರಿಗೆ ಕಲೆ, ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿರುವ ಗಾನಕೋಗಿಲೆ ಕವಿತಾ ಕೃಷ್ಣಮೂರ್ತಿ ಸುಬ್ರಹ್ಮಣ್ಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಲಾಯಿತು.

ಇದೇ ವೇಳೆ ವಾಣಿಜ್ಯ, ಮ್ಯಾನೇಜ್‌ಮೆಂಟ್, ಅರ್ಥಶಾಸ್ತ್ರ, ಜೈವಿಕ ತಂತ್ರಜ್ಞಾನ, ಭೌತಶಾಸ್ತ್ರ, ಮನಶಾಸ್ತ್ರ, ಸಂಗೀತ, ನೃತ್ಯ, ಸಮೂಹ ಸಂವಹನ, ಜೀವಶಾಸ್ತ್ರ, ಕನ್ನಡ ಮತ್ತು ಸಂಸ್ಕೃತಿ, ಆಂಗ್ಲ ವಿಷಯದಲ್ಲಿ ಉತ್ತೀರ್ಣರಾದ 2374 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಅಲ್ಲದೆ, ಅತಿ ಹೆಚ್ಚು ಅಂಕ ಪಡೆದ ಅತುಲ್ ಭಟ್, ದಿವ್ಯಾ, ಅಭಿಷೇಕ್, ವೆಂಕಟೇಶ್ವರ್, ಮಂಜರಿ, ಹರಿ ನಿಲೇಶ್ ಸೇರಿದಂತೆ 64 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಯ ಕುಲಪತಿ ಪದ್ಮಶ್ರೀ ಡಾ.ಸಿ.ಜಿ.ಕೃಷ್ಣದಾಸ್ ನಾಯರ್, ಕುಲಪತಿ ಡಾ.ಎನ್.ಸುಂದರ್ ರಾಜನ್, ಉಪಕುಲಪತಿ ಡಾ.ಸಂದೀಪ್ ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು.